ದಿನಾಂಕ **30-10-2023** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

ಪಾಟಿ ಸವಾಲು ಃ ಶ್ರೀ ಎ ಎಮ್ ವಿ ಪ್ರತಿವಾದಿ ಪರ ವಕೀಲರಿಂದ -

ನಾನು ಪಿಯುಸಿ ಪ್ರಥಮ ಓದಿರುತ್ತೇನೆ . ನಮ್ಮದು ಮೊದಲಿನಿಂದಲೂ ಹೊಟೆಲ ವ್ಯವಹಾರ ಇದೆ ಎಂದರೆ ಸರಿ. ಹೊಟೆಲ ನಡೆಸಲು ಪ್ರತಿವಾದಿಯರಿಂದ ಅಧಿಕೃತ ಪರವಾನಿಗೆ ಪಡೆದಿರುತ್ತೇವೆ ಎಂದರೆ ಸರಿ . ನಮ್ಮ ಹೊಟೇಲ ಉದ್ಯೋಗ ನಡೆಸಲು ಪ್ರತಿವಾದಿಯರು ಯಾವತ್ತೂ ತಕರಾರು ಮಾಡಿಲ್ಲ ಎಂದರೆ ಸರಿ .

ದಾವಾಸ್ತಿಗಳಾದ 186 ಎ/2, 186 ಎ/4, 183, 187 ಮತ್ತು 190 ರ ಆಸ್ತಿಗಳು ನಮಗೆ ಹಿರಿಯರಿಂದ ಬಂದ ಆಸ್ತಿಗಳಾಗಿರುತ್ತವೆ. ಖರೀದಿ ಪತ್ರದಲ್ಲಿ ಆಸ್ತಿಗಳ ವಿಸ್ತೀರ್ಣ ನಮೂದು ಮಾಡಲಾಗಿದೆ ಎಂದರೆ ಸರಿ . ಸದ್ರಿ ಖರೀದಿ ಪತ್ರದ ಆಧಾರದ ಮೇಲೆ ನಮ್ಮ ತಂದೆಯ ಹೆಸರು ನಗರ ಮಾಪನ ಇಲಾಖೆಯಲ್ಲಿ ನಮೂದು ಆಗಿದೆ ಎಂದರೆ ಸರಿ. ಖರೀದಿ ಪತ್ರದ ಮೋಜು ಮಾಪು ಪ್ರಕಾರ ನಗರ ಮಾಪನ ಇಲಾಖೆಯಲ್ಲಿ ವಿಸ್ತೀರ್ಣ ನಮೂದು ಆಗಿದೆ ಎಂದರೆ ಸರಿ .

ಇದೇ ದಾವಾಸ್ತಿಗಳಿಗೆ ಸಂಬಂಧಿಸಿದಂತೆ ಇದೇ ನ್ಯಾಯಾಲಯದಲ್ಲಿ ನಮ್ಮ ತಂದೆ ಮತ್ತು ನಮ್ಮ ತಮ್ಮನ ವಿರುದ್ಧ ದಾವೆ ನಂ. 32/2008 ರಂತೆ ದಾವೆ ಹೂಡಿದ್ದೆ ಎಂದರೆ ಸರಿ . ಸದ್ರಿ ದಾವೆಯಲ್ಲಿ ನಾವು ಅಪಸಾತ ಮಾಡಿಕೊಂಡಿರುತ್ತೇವೆ ಎಂದರೆ ಸರಿ . ಸಿಟಿಎಸ್ ನಂ. 186 ಎ/4, 187 ಮತ್ತು 190 ಗಳಲ್ಲಿ ನನ್ನ ಹೆಸರಿನ ಮೇಲೆ ಅರ್ಧ ಹಿಸ್ಸೆಗೆ ಡಿಕ್ರಿ ಆಗಿದೆ ಎಂದರೆ ಸರಿ . ಸದ್ರಿ ಡಿಕ್ರಿಯ ಪ್ರಕಾರ ನಗರ ಮಾಪನ ಇಲಾಖೆಯಲ್ಲಿ ನನ್ನ ಹೆಸರು ದಾಖಲ ಮಾಡಿಕೊಂಡಿರುತ್ತೇನೆ ಎಂದರೆ ಸರಿ .

ಸಿಟಿಎಸ್ ನಂ. 186 ಎ/4, 187 ಮತ್ತು 190 ಗಳಲ್ಲಿ ಕಟ್ಟಡ ಕಟ್ಟಲು ಪ್ರತಿವಾದಿಯರಿಂದ ಕಟ್ಟಡ ಪರವಾನಿಗೆ ಪಡೆದಿರುತ್ತೇವೆ ಎಂದರೆ ಸರಿ . ನಿ.ಪಿ-7 ರಂತೆ ನೀಲಿನಕಾಶೆ ಸಲ್ಲಿಸಿರುತ್ತೇವೆ ಎಂದರೆ ಸರಿ . ಸದ್ರಿ ನೀಲಿನಕಾಶೆಯಲ್ಲಿ ಎಲ್ಲೆಲ್ಲಿ ಸೆಟ್ ಬ್ಯಾಕ ಬಿಡಬೇಕೆಂದು ನಮೂದಿಸಿರುತ್ತಾರೆ ಎಂದರೆ ಸರಿ . ನಿ.ಪಿ-7 ರಂತೆ ಶರತ್ತುಗಳನ್ನು ನಮೂದು ಮಾಡಿ ಪರವಾನಿಗೆ ಕೊಟ್ಟಿರುತ್ತಾರೆ ಎಂದರೆ ಸರಿ. ಕಾಲಂ ನಂ. 14 ರಲ್ಲಿ ಶರತ್ತನ್ನು ಹಿಂದೆ ಮುಂದೆ ಆಜು ಬಾಜು ಯಾರಿಗೂ ತೊಂದರೆ ಆಗದಂತೆ ಸೆಟ್ ಬ್ಯಾಕ ಬಿಡಬೇಕೆಂದು ನಮೂದಿಸಿರುತ್ತಾರೆ ಎಂದರೆ ಸರಿ . ಅದೇ ರೀತಿ ಕಾಲಂ ನಂ. 9 ರಲ್ಲಿ ಸಾರ್ವಜನಿಕ ರಸ್ತೆಯನ್ನು ತಡೆಯುವಂತೆ ಇರಬಾರದು ಎಂದು ಶರತ್ತು ಇದೆ ಎಂದರೆ ಸರಿ .

ನಮ್ಮ ಆಸ್ತಿಯ ಪೂರ್ವಕ್ಕೆ ಹಳೆಯ ಬೆಳವಿ ರಸ್ತೆ ಇದೆ ಎಂದು ನಮೂದು ಇದೆ ಎಂದರೆ ಸರಿ . ಆದರೆ ಸದ್ರಿ ರಸ್ತೆ ಪ್ರತ್ಯಕ್ಷವಾಗಿ ಇರುವುದಿಲ್ಲ. ಸದ್ರಿ ಬೆಳವಿ ರಸ್ತೆ ಖೋತ ಅವರ ಬಿಲ್ಡಿಂಗನಿಂದ ಗೋಕಾಕ ರಸ್ತೆಗೆ ಮುಟ್ಟುತ್ತದೆ ಎಂದರೆ ನನಗೆ ಗೊತ್ತಿಲ್ಲ. ಬೆಳವಿ ರಸ್ತೆ ಮುಗಿದ ನಂತರ ಎಸ್ ಕೆ ಹೈಸ್ಕೂಲ ಅವರ ಆಸ್ತಿ ಬರುತ್ತದೆ ಎಂದರೆ ಸಾಕ್ಷಿಯು ಮಧ್ಯದಲ್ಲಿ ಒಂದು ಗಟಾರು ಬರುತ್ತದೆ ಎಂದು ನುಡಿಯುತ್ತಾರೆ. ಸದ್ರಿ ಗಟಾರನ್ನು ಪ್ರತಿವಾದಿಯರೇ ಕಟ್ಟಿಸಿರುತ್ತಾರೆ ಎಂದರೆ ಸರಿ . ಸದ್ರಿ ಗಟಾರನ್ನು ಪುರಸಭೆಯವರು ನಿರ್ವಹಣೆ ಮಾಡುತ್ತಾರೆ ಎಂದರೆ ಸರಿ . ಸಾಕ್ಷಿಗೆ ಗಟಾರು ಇರುವ ಛಾಯಾ ಚಿತ್ರವನ್ನು ತೋರಿಸಲಾಗಿ ಅದನ್ನು ನೋಡಿ ಒಪ್ಪಿದ್ದರಿಂದ ಅದನ್ನು ನಿ.ಡಿ-1 ಎಂದು ಗುರುತಿಸಲಾಯಿತು. ಗಟಾರದ

ಪೂರ್ವದ ಅಂಚಿನಿಂದ ಖೋತ ಅವರ ಆಸ್ತಿ ಸುಮಾರು 8-10 ಫೂಟ ಅಂತರದಲ್ಲಿರುತ್ತದೆ. ಅದರಂತೆ ಉತ್ತರ ಕಡೆಗೆ ಹೋದಂತೆಲ್ಲ ಅಗಲ ಹೆಚ್ಚಾಗುತ್ತದೆ ಎಂದರೆ ಸರಿ . ಬೆಳವಿ ರಸ್ತೆ ಎಂದು ಹೇಳುವ ಉತ್ತರ ಭಾಗದ ಪಶ್ಚಿಮ ಬಾಜು ನನ್ನ ಮಾಲ್ಕಿ ಆಸ್ತಿ ಬರುತ್ತದೆ ಎಂದರೆ ಸರಿ. ಸಾಕ್ಷಿಗೆ ಇನ್ನೊಂದು ಛಾಯಾ ಚಿತ್ರವನ್ನು ತೋರಿಸಲಾಗಿ ಅದರಲ್ಲಿ ನೀಲಿ ಗೋಡೆ ಇರುವ ಆಸ್ತಿಯು ಪರಶುರಾಮ ಖೋತ ಇವರದ್ದು ಎಂದು ನೋಡಿ ಒಪ್ಪಿದ್ದರಿಂದ ಅದನ್ನು ನಿ.ಡಿ-2 ಎಂದು ಗುರುತಿಸಲಾಯಿತು. ಸದ್ರಿ ನೀಲಿ ಗೋಡೆಯನ್ನು ಪುರಸಭೆಯವರು ಕೆಡವಿರುತ್ತಾರೆ ಎಂದು ಜನ ತಿಳಿಸಿರುತ್ತಾರೆ. ಬೆಳವಿ ರಸ್ತೆ ಎನ್ನುವ ರಸ್ತೆಯ ದಕ್ಷಿಣ ಬಾಜು ಇರುವ ಪ್ರಕಾಶ ಖೋತ ಇವರ ಕಟ್ಟಡಗಳನ್ನು ಪ್ರತಿವಾದಿಯರು ತೆರವುಗೊಳಿಸಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಕೇವಲ ಬೇಲಿಯನ್ನು ಮಾತ್ರ ಅವರು ತೆರವುಗೊಳಿಸಿರುತ್ತಾರೆ. ಪ್ರತಿವಾದಿಯರು ಸ್ವಚ್ಛ ಮಾಡಿದ ಜಾಗ ಕಾಣುತ್ತದೆ ಎಂದರೆ ಸರಿ . ಸದ್ರಿ ಖಾಲಿ ಜಾಗ ಕಾಣುವ ಛಾಯಾ ಚಿತ್ರಗಳನ್ನು ನಿ.ಡಿ-3 ಮತ್ತು ನಿ.ಡಿ-4 ಎಂದು ಗುರುತಿಸಲಾಯಿತು.

ಪ್ರಕಾಶ ಖೋತ ಮತ್ತು ಪರಶುರಾಮ ಖೋತ ಇನ್ನಿತರರ ಕಟ್ಟಡಗಳನ್ನು ತೆರವುಗೊಳಿಸಿದ್ದರ ಉದ್ದೇಶ ಎಂದರೆ ಬೆಳವಿ ರಸ್ತೆಯನ್ನು ಅಗಲೀಕರಣ ಮಾಡುವುದಾಗಿತ್ತು ಎಂದರೆ ಸರಿಯಲ್ಲ. ಯಾವ ಉದ್ದೇಶಕಾಗಿ ಅದನ್ನು ಸ್ವಚ್ಛ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

ಪ್ರತಿವಾದಿಯರು ತೆರವುಗೊಳಿಸಲು ಬಂದಾಗ ನಾನು ಮತ್ತು ಇತರರು ತಕರಾರು ಮಾಡಿದಾಗ ಪ್ರತಿವಾದಿಯರು ನಗರಭೂಮಾಪನ ಇಲಾಖೆಯವರಿಗೆ ಅಳತೆ ಮಾಡಲು ಅರ್ಜಿ ಕೊಟ್ಟಿದ್ದರು ಎಂದರೆ ಸರಿ . ದಿನಾಂಕ 11-05-2016 ರಂದು ನನಗೆ ಮತ್ತು ಅಕ್ಕಪಕ್ಕದವರಿಗೆ ಮೋಜಣಿ ಸಲುವಾಗಿ ನಗರ ಭೂಮಾಪಕರು ನೋಟಿಸು ಕೊಟ್ಟಿರುತ್ತಾರೆ ಎಂದರೆ ಸರಿ . ಆ ಪ್ರಕಾರ ದಿನಾಂಕ 11-05-2016 ರಂದು ನಮ್ಮ ಮತ್ತು ಇತರರ ಸಮಕ್ಷಮ ನಗರ ಭೂಮಾಪಕರು ಮೋಜಣಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಗೆ

ಮೋಜಣಿ ಮಾಡಿದ ಬಗ್ಗ ಪಿಟಿ ಶೀಟನ್ನು ತೋರಿಸಲಾಗಿ ಅದನ್ನು ನೋಡಿ ಒಪ್ಪಿದ್ದರಿಂದ ಅದನ್ನು ನಿ.ಡಿ-5 ಎಂದು ಗುರುತಿಸಲಾಯಿತು. ಸದ್ರಿ ಪಿಟಿ ಶೀಟನ್ನು ನಗರ ಮಾಪಕರು ಅಧಿಕೃತವಾಗಿ ತಯಾರು ಮಾಡಿರುತ್ತಾರೆ ಎಂದರೆ ಸರಿ .

ಸಿ ಟಿ ಎಸ್ ನಂ. 186 ಎ/4 ರಲ್ಲಿ ಬಿ ಎಂದು ಕೇಸರಿ ಬಣ್ಣದಿಂದ ತೋರಿಸಿದ ಆಸ್ತಿ ನನ್ನ ಮತ್ತು ನನ್ನ ತಮ್ಮನ ಆಸ್ತಿ ಎಂದರೆ ಸರಿ . ಕೇಸರಿ ಬಣ್ಣದಲ್ಲಿ ತೋರಿಸಿದ 50 ಚೌರಸ ಮೀಟರ ಅತಿಕ್ರಮಣ ಮಾಡಿರುತ್ತಾರೆ ಎಂದು ನಮೂದು ಇದೆ ಎಂದರೆ ನನಗೆ ಗೊತ್ತಿಲ್ಲ. ಸದ್ರಿ ಪಿಟಿ ಶೀಟ ಮೇಲೆ ನಾವು ಅಪೀಲು ಮಾಡಿಲ್ಲ ಎಂದರೆ ಸರಿ . 50 ಚೌರಸ ಮೀಟರನ್ನು ನಾವು ಅತಿಕ್ರಮಣ ಮಾಡಿದ್ದರಿಂದ ಅಪೀಲು ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ನಾವು ಸರಕಾರದ ಆಸ್ತಿಯನ್ನು ಬೇಕಾಯ್ದೆಶೀರವಾಗಿ ಅತಿಕ್ರಮಣ ಮಾಡಿ ಕಟ್ಟಡ ಕಟ್ಟಿದ್ದರಿಂದ ಪ್ರತಿವಾದಿಯರು ತೆರವುಗೊಳಿಸಲು ಅವಕಾಶ ಇದೆ ಎಂದರೆ ಸರಿಯಲ್ಲ. ಪೂರ್ವಸಭೆ ನಿಯಮಾವಳಿ ಪ್ರಕಾರ ಅತಿಕ್ರಮಣ ಆದ ಜಾಗವನ್ನು ತೆರವುಗೊಳಿಸಲು ಯಾವುದೇ ಪೂರ್ವ ನೋಟಿಸು ಕೊಡುವ ಅವಶ್ಯಕತೆ ಇಲ್ಲ ಎಂದರೆ ಇರಬಹುದು.

ಸರಕಾರಿ ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ಅಕ್ರಮ ಕಟ್ಟಡ ನಿರ್ಮಾಣ ಮಾಡಿ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಬೆಳವಿ ರಸ್ತೆಯನ್ನು ಸಂಪೂರ್ಣ ನಿರ್ಮಾಣ ಮಾಡಿದರೆ ಸಾರ್ವಜನಿಕರಿಗೆ ತುಂಬಾ ಅನುಕೂಲವಾಗುತ್ತದೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೆ ಕೇ ಸರಿ ಅದೇ

ಸಿ ಜೆ & ಜೆ ಎಂ ಎಫ್ ಸಿ ಹುಕ್ಕೇರಿ